## ಸುದ್ದಿ ಸಂಕ್ಷೇಪ

### 'ವಾಮಾಚಾರಕ್ಕೆ ವಿರುದ್ಧವಾಗಿ ಕಾಳಾಮುಖ'

**ಬೆಂಗಳೂರು:** ವಾಮಾಚಾರ ಪದ್ಧತಿಗೆ ವಿರುದ್ಧವಾಗಿ ಕಾಳಾಮುಖ ಹಾಗೂ ಪಾಶುಪತ ಹುಟ್ಟಿಕೊಂಡಿತು ಎಂದು ಇತಿಹಾಸತಜ್ಞೆ ಡಾ. ವಸುಂಧರಾ ಫಿಲಿಯೋಜಾ ತಿಳಿಸಿದರು. ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ ದಕ್ಷಿಣ ಪ್ರಾದೇಶಿಕ ಕೇಂದ್ರ ಗುರುವಾರ ಆಯೋಜಿಸಿದ್ದ 'ಕಾಳಮುಖ ಮತ್ತು ಪಾಶುಪತ ಶೈವಧರ್ಮ ಹಾಗೂಕರ್ನಾಟಕದ ದೇವಾಲಯಗಳು' ಉಪನ್ಯಾಸ ಮಾಲಿಕೆಯಲ್ಲಿ ಮಾತನಾಡಿದ ಅವರು ಪಾಶುಪತ ಹಾಗೂ ಕಾಳಾಮುಖ, ಬಾದಾಮಿ ಚಾಲುಕ್ಯರ ರಾಜ್ಯಾಡಳಿತ ಸಂದರ್ಭದಲ್ಲಿ ಕರ್ನಾಟಕವನ್ನು ಪ್ರವೇಶಿಸಿತು ಅಲ್ಲದೆ ಶಿವ ಅವರ ಮುಖ್ಯ ದೇವತೆಯಾಗಿತ್ತು. ಇದೇ ಶೈವಧರ್ಮದ ಹುಟ್ಟಿಗೆ ಕಾರಣವಾಯಿತು ಎಂದರು. ಕನ್ನಡ ಭಾಷಾ ಶ್ರೀಮಂತಿಕೆಯಲ್ಲಿ ಕಾಳಾಮುಖ ಮತ್ತು ಪಾಶುಪತದ ಪಾತ್ರ ಮಹತ್ವದ್ದಾಗಿದ್ದು ಸಾಹಿತ್ಯಕ ಲಿಖಿತ ದಾಖಲೆಗಳು ಅಲಭ್ಯವಿರುವುದು ವಿಷಾದನೀಯ. ಆದರೆ ದೇವಾಲಯಗಳ ಮೇಲೆ ಈ ಕುರಿತು ಸಾಕ್ಷಿಗಳಿದ್ದು ಅವರ ಬರವಣಿಗೆ ಪದ್ಯ ರೂಪ ಹೋಲುತ್ತದೆ. ಛಂದಸ್ಸು ಹಾಗೂ ಕಂದ ಪದ್ಯ ಪ್ರಾಕಾರದಲ್ಲಿದ್ದು ಸಂಗೀತಕ್ಕೆ ಹೋಲಿಕೆಯಾಗುತ್ತವೆ ಎಂದರು.

### ಕೆಎಎಸ್‌ಗೆ ಉಚಿತ ತರಬೇತಿ

ಆಸ್ಪೈರ್ ಸ್ಟಡಿ ಸರ್ಕಲ್ ಅ. 2ರಂದು ಕೆಎಎಸ್ ಮುಖ್ಯ ಪರೀಕ್ಷೆಯ ಐಚ್ಛಿಕ ಕನ್ನಡ ಮತ್ತು ಇತಿಹಾಸ ವಿಷಯ ಬೋಧನೆಗೆ ಉಚಿತ ತರಗತಿ ಏರ್ಪಡಿಸಿದೆ. ತರಗತಿಗಳಲ್ಲಿ ಪರೀಕ್ಷೆಯ ಬರೆಯುವ ಕ್ರಮ, ಓದುವ ರೀತಿ ಹೇಳಿಕೊಡಲಾಗುತ್ತದೆ. ಹೆಚ್ಚಿನ ವಿವರಗಳಿಗೆ ಶಿವಶಂಕರ ದಡ್ಡೆ (95380 83216)ಸಂಪರ್ಕಿಸುವಂತೆ ಕೋರಲಾಗಿದೆ.

### ಹಸ್ತಪ್ರತಿ ತರಗತಿಗೆ ಅರ್ಜಿ ಆಹ್ವಾನ

ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ 2011–12ನೇ ಸಾಲಿನ ಹಸ್ತಪ್ರತಿ ಅಧ್ಯಯನ ತರಗತಿಗಳಿಗೆ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿರುವವರು ಅರ್ಜಿ ಸಲ್ಲಿಸಲು ಅರ್ಹರು. ತರಗತಿಯಲ್ಲಿ ಪ್ರಾಚೀನ ಓಲೆಗರಿ– ಕಾಗದದ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ದಾಖಲೀಕರಣ ಇತ್ಯಾದಿ ವಿಷಯಗಳನ್ನು ಹೇಳಿಕೊಡಲಾಗುತ್ತದೆ. ಅ.10ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂರವಾಣಿ 26615877.

### ಅ.1ರಂದು ವಿದ್ಯುತ್ ವ್ಯತ್ಯಯ

ಹೊಸಕೋಟೆ ತಾಲೂಕು ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ತುರ್ತು ನಿರ್ವಾಹಣಾ ಕಾರ್ಯವಿರುವುದರಿಂದ ಅ.1ರಂದು ಬೆಳಗ್ಗೆ 10ರಿಂದ ಸಂಜೆ 6ಗಂಟೆಯವರೆಗೆ ಜಡಿಗೇನಹಳ್ಳಿ, ಮಾಕನಹಳ್ಳಿ, ಅವಲಹಳ್ಳಿ, ಕೈಗಾರಿಕಾ ಪ್ರದೇಶ, ಭಕ್ತರಹಳ್ಳಿ, ಪೂಜೇನ, ಅಗ್ರಹಾರದ ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ವ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

### ಮೇವು ಉತ್ಪಾದನೆ ಕುರಿತು ತರಬೇತಿ

ರಾಜ್ಯ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ ಅ.10ರಿಂದ 15ರವರೆಗೆ ಹೈನುಗಾರಿಕೆ ಹಾಗೂ ಮೇವು ಉತ್ಪಾದನೆಯ ಬಗ್ಗೆ ತರಬೇತಿ ಶಿಬಿರ ಏರ್ಪಡಿಸಿದೆ. ತರಬೇತಿಯಲ್ಲಿ ಭಾಗವಹಿಸುವವರು ತಮ್ಮ ಎರಡು ಭಾವಚಿತ್ರಗಳೊಂದಿಗೆ ನೇರವಾಗಿ ತರಬೇತಿ ಶಿಬಿರಕ್ಕೆ ಹಾಜರಾಗಬಹುದು. ಮಾಹಿತಿಗೆ ದೂರವಾಣಿ 28466397.

### ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ

ಸುವಾಚ ಆಯುರ್ವೇದ ಚಿಕಿತ್ಸಾ ಮತ್ತು ಸಂಶೋಧನಾ ಕೇಂದ್ರ ಅ.1ರಂದು ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ ಏರ್ಪಡಿಸಿದೆ. ಮೂತ್ರಜನಕಾಂಗ ವೈಫಲ್ಯ, ಮೂತ್ರ ಜನಕಾಂಗಗಳ ಕಲ್ಲಿನ ಸಮಸ್ಯೆಗಳಿಂದ ಬಳಲುತ್ತಿರುವವರು ಶಿಬಿರದಲ್ಲಿ ಭಾಗವಹಿಸಬಹುದು. ವಿವರಗಳಿಗೆ ದೂರವಾಣಿ 23124990.



**ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯ ಅಧ್ಯಕ್ಷರಾಗಿ ಡಾ.ಸತ್ಯಮೂರ್ತಿ ಭಟ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಧರಣಿಗಳದ್ದೇ ಸದ್ದು | ಪೌರ ಕಾರ್ಮಿಕರ ನೇಮಕಕ್ಕೆ ಆಗ್ರಹ

# ಜಲಮಂಡಳಿ ನಿರ್ಲಕ್ಷ್ಯ: ಮಹಿಳೆಯರ ಆಕ್ರೋಶ

**ಬೆಂಗಳೂರು:** ಬಿಬಿಎಂಪಿಯಲ್ಲಿ ಗುರುವಾರ ನಡೆದ ಮಾಸಿಕ ಕೌನ್ಸಿಲ್ ಸಭೆಯಲ್ಲಿ ಬರೀ ಧರಣಿಗಳದ್ದೇ ಸದ್ದು.

ಜಲಮಂಡಳಿ ನಿರ್ಲಕ್ಷ್ಯ ವಿರುದ್ಧ ಮಹಿಳಾ ಕಾರ್ಪೊರೇಟರ್‌ಗಳು ಪ್ರತಿಭಟಿಸಿದರೆ, ಪೌರಕಾರ್ಮಿಕರ ನೇಮಕಕ್ಕೆ ಆಗ್ರಹಿಸಿ ಪ್ರತಿಪಕ್ಷ ಕಾಂ–ಗ್ರೆಸ್ ಸದಸ್ಯರು ಧರಣಿ ನಡೆಸಿದರು.

ಜಲಮಂಡಳಿ ಅಧ್ಯಕ್ಷರೂ ಸೇರಿದಂತೆ ಅಧಿಕಾರಿಗಳು ನೀರಿನ ಸಮಸ್ಯೆ ಪರಿಹರಿಸುವುದರಲ್ಲಿ ಆಸಕ್ತಿ ತೋರುತ್ತಿಲ್ಲ ಎಂದು ಕಾಂಗ್ರೆಸ್‌ನ ಮಹಿಳಾ ಸದಸ್ಯರು ಮೇಯರ್ ಪೀಠದ ಎದುರು ಪ್ರತಿಭಟನೆ ನಡೆಸಿದರು.

ತಮ್ಮ ವಾರ್ಡ್‌ನ ನೀರಿನ ಸಮಸ್ಯೆ ಹೇಳಿಕೊಂಡ ಕಾಂಗ್ರೆಸ್ ನೂರ್ ಜಹಾನ್, ಜಲಮಂಡಳಿ ಅಧಿಕಾರಿಗಳ ವಿರುದ್ಧ ವಾಗ್ದಾಳಿ ನಡೆಸಿದರು. ನೂರ್‌ಜಹಾನ್ ಅಕ್ಕಪಕ್ಕದ ವಾರ್ಡ್‌ಗಳಲ್ಲೂ ಇದೇ ಸಮಸ್ಯೆ ತಲೆದೋರಿದ್ದರಿಂದ ಆ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಸದಸ್ಯರು ಪ್ರತಿಭಟಿಸಿ ಜಲಮಂಡಳಿ ವಿರುದ್ಧ ಕಿಡಿಕಾರಿದರು. ನಂತರ ಪ್ರತಿಭಟನೆಯಲ್ಲಿ ಕಾಂಗ್ರೆಸ್‌ನ ಎಲ್ಲಾ ಸದಸ್ಯರೂ ಪಾಲ್ಗೊಂಡರು.

**ಪೌರಕಾರ್ಮಿಕರ ಪರ ಹೋರಾಟ:** ಇದಕ್ಕೂ ಮುನ್ನ ಪೌರಕಾರ್ಮಿಕರ ನೇಮಕಕ್ಕೆ ಆಗ್ರಹಿಸಿ ಕಾಂಗ್ರೆಸ್‌ನ ಮಲ್ಲೇಶ್ ಆಗ್ರಹಿಸಿದರು. ಇದಕ್ಕೆ ದನಿಗೂಡಿಸಿದ ಕಾಂಗ್ರೆಸ್ ಸದಸ್ಯರು ಈ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಆದರೆ, ಮೇಯರ್ ಒಪ್ಪದಿದ್ದರಿಂದ ಅವರ ಪೀಠದ ಎದುರು ಧರಣಿ ನಡೆಸಿದರು. ಆಗ ಗದ್ದಲ, ಕೂಗಾಟ ಹೆಚ್ಚಾಗಿ ಸಭೆಯನ್ನು ಮುಂದೂಡಲಾಯಿತು.

**ದೊಡ್ಡವರು ಚಿಕ್ಕವರಾದರು:** ಕೆಲವು ಉನ್ನತಾಧಿಕಾರಿಗಳು ಕೆಳಹುದ್ದೆಯಲ್ಲೇ ಮುಂದುವರಿಯುತ್ತಿದ್ದರೆ, ಅನೇಕ ತಳಮಟ್ಟದ ಸಿಬ್ಬಂದಿ ಉನ್ನತ ಹುದ್ದೆಯಲ್ಲಿರುವ ವಿವರ ನೀಡಿದ ಜೆಡಿ–ಎಸ್ ನಾಯಕ ಪದ್ಮನಾಭ ರೆಡ್ಡಿ ಸಭೆ ಗಮನ ಸೆಳೆದರು. ಹೆಚ್ಚುವರಿ ಆಯುಕ್ತರ ಹುದ್ದೆಯ ಅಧಿಕಾರಿ, ಕೌನ್ಸಿಲ್ ಕಾರ್ಯದರ್ಶಿಯಾಗಿದ್ದಾರೆ. ಇದಕ್ಕೆ ವಿರುದ್ಧವಾಗಿ 45ಕ್ಕೂ ಹೆಚ್ಚು ಎಆರ್‌ಒ, ಆರ್‌ಐಗಳು ಕೆಸಿಎಸ್‌ಆರ್ ನಿಯಮಕ್ಕೆ ವಿರುದ್ಧವಾಗಿ ಉನ್ನತ ಹುದ್ದೆಯಲ್ಲಿದ್ದಾರೆ ಎಂದು ವಿವರಿಸಿದರು.

**ಮಂತ್ರಿ, ಗರುಡಾಮಾಲ್ ಬಗ್ಗೆ ಗರಂ, ಬಿಜೆಪಿ ಮುಗುಂ:** ಮಂತ್ರಿ ಮತ್ತು ಗರುಡಾಮಾಲ್ ಸಭೆಯಲ್ಲಿ ಗದ್ದಲ ಎಬ್ಬಿಸಿತ್ತು.

ಆದರೆ, ಆಡಳಿತ ಪಕ್ಷ ಉತ್ತರವನ್ನೇ ನೀಡದೆ ಮುಗುಂ ಆಗಿತು. ಗರುಡಾಮಾಲ್ ಬಗ್ಗೆ ಏನು ಕ್ರಮಕೈಗೊಂಡಿದ್ದೀರಿ ಎಂದು ಕೇಳಿದ್ದಕ್ಕೆ ಮೇಯರ್ ಉತ್ತರಿಸಲಿಲ್ಲ. ಕಟ್ಟಡ ನಕ್ಷೆ ಉಲ್ಲಂಘಿಸಿರುವುದರಿಂದ ಈ ಬಗ್ಗೆ ಮುಂಗಡವಾಗಿ ನ್ಯಾಯಾಲಯದಲ್ಲಿ ಪ್ರಮಾಣಪತ್ರ ಸಲ್ಲಿಸಿರುವ ಗರುಡಾಮಾಲ್ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಕಾಂಗ್ರೆಸ್‌ನ ಚಂದ್ರಶೇಖರ್ ಆಗ್ರಹಿಸಿದರು. ಎಚ್ಚರಿಸಿದರು.

ಕಾಂಗ್ರೆಸ್‌ನ ಎಂ. ನಾಗರಾಜ್ ಮಂತ್ರಿ ಮಾಲ್ ಅಕ್ರಮ ಕುರಿತು ಅಧಿಕಾರಿಗಳು ಸಿದ್ಧಪಡಿಸಿದ ವರದಿಯನ್ನು ಕಳೆದ ಏಕೆ ಸಭೆಯಲ್ಲಿ ಮಂಡಿಸುತ್ತಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.



- **ಜಲಮಂಡಳಿ ಅಧಿಕಾರಿಗಳ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸ್‌ನ ನೂರ್ ಜಹಾನ್**
- **ಕಟ್ಟಡ ನಕ್ಷೆ ಉಲ್ಲಂಘಿಸಿದ ಮಾಲ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ಚಂದ್ರಶೇಖರ್ ಆಗ್ರಹ**

### ಅವಕಾಶ ನೀಡಬೇಡಿ... ?

**ನಗರಗಳಲ್ಲಿ ರಸ್ತೆ ಅಗಲೀಕರಣದ ಬಗ್ಗೆ ಸೂಕ್ತ ನಿರ್ಧಾರವಾಗದ ಬಗ್ಗೆ ಬಿಜೆಪಿಯ ಚಂದ್ರಶೇಖರಯ್ಯ ಬೇಸರ ವ್ಯಕ್ತಪಡಿಸಿದಾಗ, ನಂಜುಂಡಪ್ಪ ಬಾಯಿ ಮುಚ್ಚಿಸಿದರು. ನಗರಗಳಲ್ಲಿ ಹೊಗೆ, ಧೂಳು ಕುಡಿದು ಬದುಕುವಂತಾಗಿದೆ. ರಸ್ತೆಗಳು ಆಗಲೀಕರಣ ಆಗುತ್ತಿಲ್ಲ ಎನ್ನುತ್ತಿದ್ದಂತೆ ನಂಜುಂಡಪ್ಪ ಆಕ್ಷೇಪಿಸಿದರು. ಚಂದ್ರಶೇಖರಯ್ಯ ಅವರಿಗೆ ಮಾತನಾಡಲು ಅವಕಾಶ ನೀಡಬೇಡಿ ಎಂದು ಮೇಯರ್‌ಗೆ ಸಲಹೆ ನೀಡಿದರು.**

### ₹ 300 ಕೋಟಿ ತೆರಿಗೆ

**1.2 ಲಕ್ಷ ಕೈಗಾರಿಕಾ ಕಟ್ಟಡಗಳು ಬಿಬಿಎಂಪಿ ತೆರಿಗೆಯನ್ನೇ ನೀಡುತ್ತಿಲ್ಲ ! ಬಿಬಿಎಂಪಿ ವ್ಯಾಪ್ತಿಯಲ್ಲಿ 45 ಕಾರ್ಮಿಕರಿಗಿಂತ ಹೆಚ್ಚಾಗಿರುವ 2400 ಚ.ಅಡಿ ವಿಸ್ತೀರ್ಣದ ಕೈಗಾರಿಕಾ ಕಟ್ಟಡಗಳು 1.10ಲಕ್ಷ ಇವೆ. ಇವುಗಳಲ್ಲಿ ಕೈಗಾರಿಕಾ ಶೆಡ್ ಮತ್ತು ರೋಗಗ್ರಸ್ತ ಕೈಗಾರಿಕೆಗಳನ್ನು ಹೊರತುಪಡಿಸಿದರೆ, 1.2ಲಕ್ಷ ಕಟ್ಟಡಗಳು ಆಸ್ತಿ ತೆರಿಗೆಯನ್ನೇ ನೀಡುತ್ತಿಲ್ಲ ಎಂದು ಬಿಜೆಪಿಯ ಎನ್.ಆರ್. ರಮೇಶ್ ಸಭೆಗೆ ತಿಳಿಸಿ ಅಚ್ಚರಿ ಮಾಡಿಸಿದರು. ಬಿಬಿಎಂಪಿ ಲೆಕ್ಕದ ಪ್ರಕಾರ ನಗರದಲ್ಲಿರುವುದು ಬರೀ 4286 ಕೈಗಾರಿಕೆಗಳು ಮಾತ್ರ. ಆದ್ದರಿಂದ ಲೆಕ್ಕಕ್ಕೆ ಸಿಗದ ಅಪಾರ ಸಂಖ್ಯೆಯ ಈ ಕಟ್ಟಡಗಳನ್ನು ಗುರುತಿಸಿ ತೆರಿಗೆ ಸಂಗ್ರಹಿಸಬೇಕು. ಆಗ ಸುಮಾರು ₹ 300ಕೋಟಿ ತೆರಿಗೆ ಇವುಗಳಿಂದಲೇ ಸಿಗುತ್ತದೆ ಎಂದು ರಮೇಶ್ ಸಲಹೆ ನೀಡಿದರು.**

# ಹೃದಯದ ಆರೋಗ್ಯಕ್ಕೆ ಕಾಲ್ನಡಿಗೆ ಉತ್ತಮ: ಲಿಂಬಾವಳಿ




**ವಿಶ್ವ ಹೃದಯ ದಿನ ಅಂಗವಾಗಿ ಯಶೋಮತಿ ಆಸ್ಪತ್ರೆ ಹಮ್ಮಿಕೊಂಡಿದ್ದ ಕಾಲ್ನಡಿಗೆ ಜಾಥಾದಲ್ಲಿ ಆಸ್ಪತ್ರೆಯ ಹೃದಯತಜ್ಞ ಡಾ. ಸದ್ರುದ್ದೀನ್ ಶರೀಫ್, ವ್ಯವಸ್ಥಾಪಕ ನಿರ್ದೇಶಕ ಡಾ. ಅಮಿತ್‌ಕುಮಾರ್ ಕೇಶ್ರಿ, ಶಾಸಕ ಅರವಿಂದ ಲಿಂಬಾವಳಿ ಮತ್ತಿತರರು.**

**ಬೆಂಗಳೂರು:** ಮಾರತಹಳ್ಳಿಯ ಯಶೋಮತಿ ಆಸ್ಪತ್ರೆ 'ವಿಶ್ವ ಹೃದಯ ದಿನ'ದ ಅಂಗವಾಗಿ ಗುರುವಾರ 'ಕಾಲ್ನಡಿಗೆ ಜಾಥಾ' ಹಮ್ಮಿಕೊಂಡಿತ್ತು.

ಆಸ್ಪತ್ರೆಯಿಂದ ಕುಂದಲಹಳ್ಳಿ ಗೇಟ್‌ವರೆಗೆ ಏರ್ಪಡಿಸಿದ್ದ ಈ ಜಾಥಾವನ್ನು ಮಹದೇವಪುರ ಕ್ಷೇತ್ರದ ಶಾಸಕ ಅರವಿಂದ ಲಿಂಬಾವಳಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹೃದಯದ ಆರೋಗ್ಯ ಕಾಪಾಡುವಲ್ಲಿ ಮತ್ತು ಹೃದಯ ಸಂಬಂಧಿ ರೋಗ ಬಾರದಂತೆ ತಡೆಯುವಲ್ಲಿ ಕಾಲ್ನಡಿಗೆ ಪಾತ್ರ ಮಹತ್ವದ್ದು. ಎಲ್ಲ ತರಹದ ಹೃದಯ ರೋಗಗಳಿಗೆ ಯಶೋಮತಿ ಆಸ್ಪತ್ರೆ ಕಡಿಮೆ ಖರ್ಚಿನಲ್ಲಿ ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡುತ್ತಿರುವುದು ಶ್ಲಾಘನೀಯ ಎಂದರು.

ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ಅಮಿತ್ ಕುಮಾರ್ ಕೇಶ್ರಿ ಮಾತನಾಡಿ, ಪ್ರತಿದಿನ ನಿಯಮಿತವಾಗಿ ನಡೆಯುವುದರಿಂದ ರಕ್ತದೊತ್ತಡ, ಮಧುಮೇಹ, ಕೊಲೆಸ್ಟ್ರಾಲ್ ಪ್ರಮಾಣ ನಿಯಂತ್ರಣದಲ್ಲಿರುತ್ತದೆ. ಜತೆಗೆ ಹೃದಯದ ಚಟುವಟಿಕೆ ಸಹ ಸುಸ್ಥಿತಿಯಲ್ಲಿರುತ್ತದೆ. ಅಲ್ಲದೆ, ಮಾನಸಿಕ ಹಾಗೂ ದೈಹಿಕ ಆರೋಗ್ಯದ ಸುಸ್ಥಿತಿಗೂ ಕಾಲ್ನಡಿಗೆ ಸಹಕಾರಿ ಎಂದು ತಿಳಿಸಿದರು.

ಆಸ್ಪತ್ರೆಯ ಹೃದ್ರೋಗ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸದ್ರುದ್ದೀನ್ ಶರೀಫ್ 'ಜೀವನಶೈಲಿ ಹಾಗೂ ಹೃದಯದ ಆರೋಗ್ಯ'ದ ಬಗ್ಗೆ ಉಪನ್ಯಾಸ ನೀಡಿದರು. ಒತ್ತಡಕ್ಕೆ ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬುದರ ಮೇಲೆ ಹೃದಯದ ಆರೋಗ್ಯ ಅವಲಂಬಿಸಿದೆ. ಒತ್ತಡದ ಸನ್ನಿವೇಶಗಳನ್ನು ಧನಾತ್ಮಕವಾಗಿ ಸ್ವೀಕರಿಸಿ ಕೆಲಸದ ನಡುವೆ ವಿರಾಮ ಪಡೆದುಕೊಳ್ಳಬೇಕು. ಜತೆಗೆ, ಐಷಾರಾಮಿ ಜೀವನ ತೊರೆದು ನಿತ್ಯಜೀವನದಲ್ಲಿ ದೈಹಿಕ ಶ್ರಮ ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ಹೃದಯತಜ್ಞ ಡಾ. ಜೆಫ್ರಿನ್ ಆಂಥೋನಿ ಮಾತನಾಡಿ, ಬದಲಾದ ಜೀವನಶೈಲಿ ಹಾಗೂ ಆಹಾರ ವಿಧಾನದಿಂದ ನಗರದಲ್ಲಿ ಹೃದಯರೋಗಿಗಳ ಸಂಖ್ಯೆ ಹೆಚ್ಚಾಗಿದೆ. ಕಾಯಿಲೆಯಿಂದಾಗಿ ಮೃತಪಡುತ್ತಿರುವವರಲ್ಲಿ ಶೇ. 30ರಷ್ಟು ಜನ ಹೃದಯ ರೋಗಿಗಳಿದ್ದಾರೆ. ಕಾಯಿಲೆಯಿಂದ ಮೃತಪಡುತ್ತಿದ್ದವರಲ್ಲಿ ಹಿಂದೆ ಕ್ಷಯ ರೋಗಿಗಳ ಸಂಖ್ಯೆ ಅಧಿಕವಾಗಿತ್ತು. ಆದರೆ, ಈಗ ಆ ಸ್ಥಾನವನ್ನು ಹೃದಯ ರೋಗ ಆಕ್ರಮಿಸಿಕೊಂಡಿದೆ ಎಂದರು.

ಈ ಕಾಲ್ನಡಿಗೆಯಲ್ಲಿ ಶಾಸಕ ಅರವಿಂದ ಲಿಂಬಾವಳಿ, ಡಾ. ಅಮಿತ್ ಕುಮಾರ್ ಕೇಶ್ರಿ, ಡಾ. ಸದ್ರುದ್ದೀನ್ ಶರೀಫ್ ಸೇರಿದಂತೆ ಆಸ್ಪತ್ರೆಯ ಇತರ ವೈದ್ಯರು, ಅಧಿಕಾರಿಗಳು, ಸಿಬ್ಬಂದಿ ಹಾಗೂ ಸ್ಥಳೀಯರು ಭಾಗವಹಿಸಿದ್ದರು.

# ವಿವಿಧ ಕಾಮಗಾರಿಗಳಿಗೆ ಚಾಲನೆ

**ಕೃಷ್ಣರಾಜಪುರ:** ಮಹದೇವಪುರ ಕ್ಷೇತ್ರದ ಮಾರತ್‌ಹಳ್ಳಿ ಮತ್ತು ಬೆಳ್ಳಂದೂರು ವಾರ್ಡ್‌ಗಳ ವಿವಿಧ ಬಡಾವಣೆಗಳಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್ ದೀಪ ಸೇರಿದಂತೆ ಒಟ್ಟು 3 ಕೋಟಿ ಮೊತ್ತದ ಕಾಮಗಾರಿಗಳಿಗೆ ಸ್ಥಳೀಯ ಶಾಸಕ ಅರವಿಂದ ಲಿಂಬಾವಳಿ ಹಾಗೂ ಪಾಲಿಕೆ ಸದಸ್ಯೆ ವರಲಕ್ಷ್ಮಿ ಚಾಲನೆ ನೀಡಿದರು.

ಮಾರತ್‌ಹಳ್ಳಿ ವಾರ್ಡ್‌ಗೆ ಸೇರಿದ ಯಮಲೂರು, ಬೆಳ್ಳಂದೂರು ಕೆರೆಗಳಿಗೆ ಸೇತುವೆ, ತಲಘಟ್ಟದ ಡಿಫೆನ್ಸ್ ಕಾಲೋನಿ ರಸ್ತೆ, ದೊಡ್ಡಕನ್ನಹಳ್ಳಿ ರಾಜೀವ್‌ಗಾಂಧಿ ಕಾಲೋನಿ ಹಾಗೂ ಗೇರ್ ಕಾಲೇಜುಗಳಿಗೆ ವಿದ್ಯುತ್ ದೀಪಗಳ ಕಾಮಗಾರಿ, ಅಂಬೇಡ್ಕರ್ ನಗರ ಮತ್ತು ದೇವರಬೀಸನಹಳ್ಳಿಗಳಲ್ಲಿ ಸ್ತ್ರೀಶಕ್ತಿ ಕೇಂದ್ರಗಳು, ದೊಡ್ಡಕನ್ನಹಳ್ಳಿ ಮತ್ತು ದೇವರಬೀಸನಹಳ್ಳಿಗಳಲ್ಲಿ ಶಾಲಾಕಟ್ಟಡ ಉದ್ಘಾಟನೆ, ಶೌಚಾಲಯ ಕಟ್ಟಡಗಳೂ ಸೇರಿದಂತೆ ಒಟ್ಟು 3 ಕೋಟಿ ಮೊತ್ತದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಲಿಂಬಾವಳಿ ಗುಣಮಟ್ಟದ ಕಾಮಗಾರಿ ಹಾಗೂ ನಿಗದಿತ ಸಮಯದಲ್ಲಿ ಮಾಡುವಂತೆ ಗುತ್ತಿಗೆದಾರರಿಗೆ ಸಲಹೆ ನೀಡಿದರು.

ಯಮ್ಮಲೂರು ಕೆರೆಗೆ ಸೇತುವೆ ಅತ್ಯವಶ್ಯಕವಾಗಿತ್ತು. ಈ ಹಿಂದೆ ಬಿಡಿಎ ಈ ಕಾಮಗಾರಿಯನ್ನು ಕೈಗೆತ್ತಿಕೊಂಡಿತ್ತಾದರೂ ಸೂಕ್ತ ಅನುದಾನವಿಲ್ಲದೆ ನೆನೆಗುದಿಗೆ ಬಿದ್ದಿದ್ದು ವಾಹನ ಸವಾರರಿಗೆ ತುಂಬ ತೊಂದರೆಯಾಗುತ್ತಿತ್ತು. ಪಾಲಿಕೆ ಸದಸ್ಯೆಯಾದ ನಂತರ ಈ ಯೋಜನೆಗಾಗಿ ಸತತ ಶ್ರಮಪಟ್ಟಿದ್ದು ಈಗ ಸಮರ್ಪಕ ಅನುದಾನ ಮಂಜೂರಾಗಿದೆ ಎಂದು ಮಾರತ್‌ಹಳ್ಳಿ ವಾರ್ಡ್ ಸದಸ್ಯೆ ವರಲಕ್ಷ್ಮಿ ತಿಳಿಸಿದರು. ಪಾಲಿಕೆ ಸದಸ್ಯರಾದ ಶ್ರೀಧರ್ ರೆಡ್ಡಿ, ಕ್ಷೇತ್ರ ಬಿಜೆಪಿ ಅಧ್ಯಕ್ಷ ಜಯಚಂದ್ರಾರೆಡ್ಡಿ, ಮುಖಂಡರಾದ ಎಸ್. ಜಯಪ್ರಕಾಶ್, ಕೆಂಪಾಪುರ ಮೂರ್ತಿ, ನಂದೀಶ್, ಆಶಾ, ಮುನಿವೆಂಕಟಪ್ಪ ಮುಂತಾದವರು ಹಾಜರಿದ್ದರು.

# ನೇತ್ರತಜ್ಞ ಡಾ. ಮ್ಯಾಥ್ಯೂ ಕುರಿಯನ್ ಕುಮ್ಮೇಲಿಲ್‌ಗೆ ಆರ್ಬಿಸ್ ಪದಕ ಪ್ರದಾನ

**ಬೆಂಗಳೂರು:** ನಾರಾಯಣ ನೇತ್ರಾಲಯದ ನೇತ್ರತಜ್ಞ ಡಾ. ಮ್ಯಾಥ್ಯೂ ಕುರಿಯನ್ ಕುಮ್ಮೇಲಿಲ್ ಅವರಿಗೆ ಆಸ್ಟ್ರಿಯಾದ ವಿಯೆನ್ನಾದಲ್ಲಿ ನಡೆದ ಕಾಂಗ್ರೆಸ್ ಆಫ್ ದಿ 'ಯುರೋಪಿಯನ್ ಸೊಸೈಟಿ ಆಫ್ ಕೆಟರಾಕ್ಟ್ ಅಂಡ್ ರಿಫ್ರಾಕ್ಟಿವ್ ಸರ್ಜನ್ಸ್'(ಇಎಸ್‌ಸಿಆರ್‌ಎಸ್)ನಲ್ಲಿ ಪ್ರತಿಷ್ಠಿತ 'ಆರ್ಬಿಸ್ ಪದಕ' ನೀಡಲಾಗಿದೆ. ಆರ್ಬಿಟ್ ಇಂಟರ್‌ನ್ಯಾಷನಲ್ ಸಂಸ್ಥೆ ಇಎಸ್‌ಸಿಆರ್‌ಎಸ್ ಕಾಂಗ್ರೆಸ್‌ನಲ್ಲಿ ಅತ್ಯುತ್ತಮ ವಿಚಾರ ಮಂಡನೆ ಮಾಡಿದವರಿಗೆ ಈ ಪದಕ ನೀಡುತ್ತಿದ್ದು, ಡಾ. ಕುರಿಯನ್ ಅವರ 'ಟೆಲಿ ಸರ್ಜಿಕಲ್ ಟ್ರೈನಿಂಗ್ ಟು ಎನ್ಹಾನ್ಸ್ ಸೇಫ್ಟಿ ಅಂಡ್ ಎಫೆಕ್ಟಿವ್‌ನೆಸ್ ಆಫ್ ಫಾಕೋಟ್ರೈನಿಂಗ್' ಎಂಬ ವಿಚಾರ ಮಂಡನೆಗೆ ಪದಕ ದೊರೆತಿದೆ. ಸಂಸ್ಥೆಯ ಅಧ್ಯಕ್ಷ ರಾಬರ್ಟ್ ವಾಲ್ಟರ್ಸ್ ಪದಕ ಪ್ರದಾನ ಮಾಡಿದ್ದಾರೆ. ಡಾ.ಮ್ಯಾಥ್ಯೂ ಅವರು ವೆಲ್ಲೂರ್‌ನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ ತಮ್ಮ ವೈದ್ಯಕೀಯ ಪದವಿ ಮುಗಿಸಿ, ನಗರದ ಸೇಂಟ್ ಜಾನ್ಸ್ ನ್ಯಾಷನಲ್ ಅಕಾಡೆಮಿ ಆಫ್ ಹೆಲ್ತ್ ಸೈನ್ಸಸ್‌ನಲ್ಲಿ ಆಪ್ಥಾಲ್ಮಜಿಯಲ್ಲಿ ಎಂ.ಎಸ್. ಪಡೆದಿದ್ದಾರೆ. ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್ಸ್ ಡಿಪ್ಲೊಮಾ ಪಡೆದಿರುವ ಅವರು ಚೆನ್ನೈನ ಶಂಕರ ನೇತ್ರಾಲಯದಲ್ಲಿ ರತನ್ ಟಾಟಾ ಫೆಲೋಶಿಪ್ ಕೂಡ ಪಡೆದಿದ್ದಾರೆ.

## ನಗರ ಕಾರ್ಯಕ್ರಮ

ಶುಕ್ರವಾರ 30.9.2011

**ಬೆಳಗ್ಗೆ**

**10.30**



**ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ: ವಿಶ್ವಸಂಸ್ಥೆ ಶತಮಾನದ ಅಭಿವೃದ್ಧಿ ಗುರಿ– ತಾಯಿ ಆರೋಗ್ಯ ಸುಧಾರಣೆ, ಅತಿಥಿ– ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ನ್ಯಾ.ಡಾ. ರಾಮಾಜೋಯಿಸ್, ರಾಣಿ ಸತೀಶ್, ಚಾನ್ಸರಿ ಹೊಟೇಲ್. ಸಂಜೆ 6.30**

**ಸಂಜೆ**

**06.30**



**ಬಾಳೆಹೊನ್ನೂರು ಶ್ರೀಮದ್ ರಂಭಾಪುರೀ ಜಗದ್ಗುರುಗಳವರ ದಸರಾ ಧರ್ಮಸಮ್ಮೇಳನ ಸಮಿತಿ: ಜನಜಾಗೃತಿ ಧರ್ಮ ಸಮ್ಮೇಳನ, ಅತಿಥಿ– ರೇಣುಕ ವೀರ ಸೋಮೇಶ್ವರ, ರೇಣುಕಾಚಾರ್ಯ ಗುರುಕುಲ, ಡಾ.ಅಭಿನವ ಮಲ್ಲಿಕಾರ್ಜುನ ಸ್ವಾಮೀಜಿ, ಕೆ.ವಿ. ನಾಗರಾಜಮೂರ್ತಿ, ಸಿದ್ದರಾಮಯ್ಯ, ಬಿ.ಎನ್. ಬಚ್ಚೇಗೌಡ, ಎಂ.ಪಿ. ರೇಣುಕಾಚಾರ್ಯ, ರಾಮದಾಸ್, ಕೃಷ್ಣಪಾಲೇಮಾರ್, ಬಿ.ವೈ. ರಾಘವೇಂದ್ರ, ಬಸವರಾಜ ಹೊರಟ್ಟಿ, ಪರಣ್ಣ ಈಶ್ವರಪ್ಪ ಮುನವಳ್ಳಿ, ಮಾನವ ಧರ್ಮ ಮಂಟಪ, ಶ್ರೀರಾಮ ಮಂದಿರ ಆಟದ ಮೈದಾನ, ರಾಜಾಜಿನಗರ.**

**ಕಂಚಿ ಶಂಕರ ಮಠ:** 77ನೇ ಅವತಾರ ಮಹೋತ್ಸವ, ಗಾಯನ– ಕೆ. ಗಾಯಿತ್ರಿ, ಮೃದಂಗ– ಶ್ರೀರಾಮ್, ಪಿಟೀಲು– ಚಾರುಲತಾ ರಾಮನುಜಂ, ಮಠದ ಆವರಣ, 5ನೇ ಮುಖ್ಯರಸ್ತೆ, ಮಲ್ಲೇಶ್ವರ 11ನೇ ಕ್ರಾಸ್, ಸಂಜೆ 5.

**ನವರಾತ್ರಿ ಸಂಗೀತೋತ್ಸವ:** ಯುಗಳ ವೀಣಾ ವಾದನ– ವಿ. ಗೀತಾ ರಮಾನಂದ, ವಿ. ರೇವತಿ ಮೂರ್ತಿ, ಮೃದಂಗ– ಎಂ.ಎ. ಕೃಷ್ಣಮೂರ್ತಿ, ಖಂಜರಿ– ವಿ. ವ್ಯಾವಿಠ್ಠಲ ಸಿ.ಪಿ, ಶ್ರೀವಾಣಿ ವಿದ್ಯಾಕೇಂದ್ರ ಸಭಾಂಗಣ, 2ನೇ ಹಂತ ರಾಜಾಜಿನಗರ, ಸಂಜೆ 6.30.

**ಸಮತಾ ಆರ್.ಎಂ:** ಭರತನಾಟ್ಯ, ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತು, ಯವನಿಕಾ ಸಭಾಂಗಣ, ನೃಪತುಂಗ ರಸ್ತೆ, ಸಂಜೆ 6.30.

**ಸಂಜೀವ್ ಕೋರಟಿ:** ಸಿತಾರ್ ವಾದನ, ತಬಲ– ರಾಹುಲ್, ಬೆಂಗಳೂರು ಇಂಟರ್‌ನ್ಯಾಷನಲ್ ಸೆಂ–ಟರ್, 4ನೇ ಮುಖ್ಯರಸ್ತೆ, 2ನೇ ಕ್ರಾಸ್, ದೊಮ್ಮಲೂರು 2ನೇ ಹಂತ, ಸಂಜೆ 6.

**ಶ್ರೀದೇವಿಮಹಾತ್ಮೆ:** ಯಕ್ಷಗಾನ, ತಂಡ– ಸಿರಿಕಲಾ ಮೇಳ, ಶ್ರೀಪ್ರಸನ್ನ ಮಹಾಗಣಪತಿ ದೇವಸ್ಥಾನ, ಕೋರಮಂಗಲ, ಸಂಜೆ 6.

**ವಿ. ಸತ್ಯನಾರಾಯಣಚಾರ್ಯ:** ವಿಷಯ– ಕಪಿಲೋಪದೇಶ, ರಾಗಿಗುಡ್ಡ ಶ್ರೀಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, 9ನೇ ಬ್ಲಾಕ್, ಜಯನಗರ, ಸಂಜೆ 6.30.

**ಡಾ.ಶ್ರೀರಾಮ ಭಟ್ಟ:** ವಿಷಯ– ಬ್ರಹ್ಮಶಕ್ತಿಯ ಉಪಾಸನೆ, ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಎಪಿಕೆ ರಸ್ತೆ, 2ನೇ ಹಂತ, ತ್ಯಾಗರಾಜನಗರ, ಬೆಳಗ್ಗೆ 9.30.

**ವಿ. ಜೆ.ಪಿ.ನಾಗಾರಾಜಾಚಾರ್ಯ:** ವಿಷಯ– ಷಟ್ ಪ್ರಶ್ನೆ, ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಶೇಷಾದ್ರಿಪುರ, ಸಂಜೆ 6.30.

**ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ:** ವಿಷಯ– ಶ್ರೀನಿವಾಸ ಕಲ್ಯಾಣ, ಹರಿದಾಸ ಸೇವಾ ಸಮಿತಿ, ಶ್ರೀರಾಮಮಂದಿರ, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30.

**ಕೆ.ಕೆ. ಹೆಬ್ಬಾರ್:** ಚಿತ್ರಪ್ರದರ್ಶನ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಅರಮನೆ ರಸ್ತೆ, ಬೆಳಗ್ಗೆ 10.

**ಶ್ರೀಮಹಾಯಾಗ ಕ್ಷೇತ್ರ ಗಾಯತ್ರೀ ದೇವಸ್ಥಾನ:** ವಿಶೇಷ ಅಲಂಕಾರ, ಚಂಡಿಕಾ ಹೋಮ, ಮಹಾಯಾಗ ಕ್ಷೇತ್ರ ಶ್ರೀಗಾಯತ್ರೀ ದೇವಸ್ಥಾನ, ಯಶವಂತಪುರ ವೃತ್ತ, ಸಂಜೆ 6.30.

**ಶ್ರೀಚೌಡೇಶ್ವರಿ ದೇವಾಲಯ:** ಸಂಕಲ್ಪ, ಅಭಿಷೇಕ, ಸುಮಂಗಲಿ ಪೂಜೆ, ಚಂಡಿಪಾರಾಯಣ, ಭಾದ್ರಪದ ಕೃಷ್ಣ ಪಕ್ಷ, ಚಂಡಿ ಕಳಸ ಸ್ಥಾಪನೆ, 1ನೇ ಅಡ್ಡರಸ್ತೆ, ಎಚ್‌ಎಂಟಿ ಬಡಾವಣೆ, ಮತ್ತಿಕೆರೆ, ಮಧ್ಯಾಹ್ನ 2.30.

**ಆಂಜನೇಯಸ್ವಾಮಿ ವೆಲ್‌ಫೇರ್ ಅಸೋಸಿಯೇಷನ್:** ನಾಗದೇವಿ ಹೋಮ, ನಾರಾಯಣ ಹೋಮ, ರೇಣುಕಾ ಯಲ್ಲಮ್ಮ, ಅಲಂಕಾರ, ಚಿನ್ನಯ್ಯನಪಾಳ್ಯ, ಮಧ್ಯಾಹ್ನ 3.

**ಮಹಾಲಕ್ಷ್ಮೀ ಶ್ರೀವಾಸವೀ ಸೇವಾ ಸಮಿತಿ ಟ್ರಸ್ಟ್:** 14ನೇ ವರ್ಷದ ಶರನ್ನವರಾತ್ರಿ ವಿಶೇಷ ಪೂಜೆ, ಭಾಗ್ಯಲಕ್ಷ್ಮೀ ಮದನಗೋಪಾಲ್ ಅವರಿಂದ ಗಾಯನ, ವಾಸವಿ ದೇವಸ್ಥಾನ ರಸ್ತೆ, 9ನೇ ಅಡ್ಡರಸ್ತೆ, ಮಹಾಲಕ್ಷ್ಮೀಪುರ, ಸಂಜೆ 7.

**ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿ ಮಠ:** ಶರನ್ನವರಾತ್ರೋತ್ಸವ, ಸುದರ್ಶನ ಹೋಮ, ರಾಜೀವ್ ಗಾಂಧಿ ಸರ್ಕಲ್, ಶೇಷಾದ್ರಿಪುರ, ಬೆಳಗ್ಗೆ 8.

**ವರಸಿದ್ಧಿ ವಿನಾಯಕ ದೇವಾಲಯ:** ನವರಾತ್ರಿ ಉತ್ಸವ, ಭಕ್ತಿಗೀತೆಗಳು, ಕೆನರಾ ಬ್ಯಾಂಕ್ ಕಾಲೋನಿ, ನಾಗರಬಾವಿ ರಸ್ತೆ, ಬೆಳಗ್ಗೆ 8.

**ನಗರೇಶ್ವರಸ್ವಾಮಿ ದೇವಾಲಯ:** ಶ್ರೀದುರ್ಗಾದೇವಿಗೆ ವಿಶೇಷ ಅಲಂಕಾರ, ಹರಿದ್ರಾ, ನಗರ್ತಪೇಟೆ, ಸಂಜೆ 6.30.

**ಗಣಪತಿ ಅನ್ನಪೂರ್ಣೇಶ್ವರಿ ಟ್ರಸ್ಟ್:** ಶರನ್ನವರಾತ್ರಿ ಮಹೋತ್ಸವ, ವಿಳ್ಯೆದೆಲೆ ಅಲಂಕಾರ, ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಾಲಯ, 3ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಭುವನೇಶ್ವರಿ ನಗರ, ಕೆ.ಪಿ.ಅಗ್ರಹಾರ, ಬೆಳಗ್ಗೆ 11.30.

**ಶ್ರೀರಾಜರಾಜೇಶ್ವರಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** ನವರಾತ್ರಿ ಹಬ್ಬದ ಬೆಣ್ಣೆ ಅಲಂಕಾರ, ಶ್ರೀಗಂಧದ ಅಲಂಕಾರ, 16ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಬಿಟಿಎಂ ಬಡಾವಣೆ, ಬೆಳಗ್ಗೆ 8.

**ಶ್ರೀಅಂಬಾಭವಾನಿ ದೇವಾಲಯ:** ಶರನ್ನವರಾತ್ರಿ ಮಹೋತ್ಸವ, ಮಹಾಲಕ್ಷ್ಮೀ ಶಕ್ತಿಹೋಮ, ಅರಿಶಿನ ಕುಂಕುಮ ಅಲಂಕಾರ ಭವಾನಿನಗರ, ಕೆಂಪೇಗೌಡನಗರ, ಬೆಳಗ್ಗೆ 9.

**ಪಂಪ ಸಾಂಸ್ಕೃತಿಕ ತಂಡ:** ಆರ್.ನಾಗೇಶ್ ನೆನಪಿನ ನಾಟಕೋತ್ಸವದ ಸಮಾರೋಪ ಸಮಾರಂಭ, ನಾಟಕ– ಕೃಷ್ಣೇಗೌಡನ ಆನೆ, ನಿರ್ದೇಶನ– ಆರ್.ನಾಗೇಶ್, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30.

**ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು:** ಲಿ. ದೊಡ್ಡಬೆಳವಂಗಲದ ಗುರುಸಿದ್ದಯ್ಯ ಅವರ ಸಿದ್ದಲಿಂಗಯ್ಯ ಮತ್ತು ಸಿದ್ದಗಂಗಮ್ಮ ದತ್ತಿ ಉಪನ್ಯಾಸ, ಅತಿಥಿ– ದಿಬ್ಬೂರು ಸಿದ್ದಲಿಂಗಪ್ಪ, ಡಾ.ಎಸ್.ಎಂ. ಶಿವಪ್ಪ, ಬಿ. ಬಸವರಾಜ್, ಜೆಎಸ್‌ಎಸ್ ಕಾಲೇಜು ಸಭಾಂಗಣ, 38ನೇ ಕ್ರಾಸ್, 1ನೇ ಮುಖ್ಯರಸ್ತೆ, ಜಯನಗರ, ಸಂಜೆ 6.

**ಕರ್ನಾಟಕ ಕರಕುಶಲ ಮಂಡಳಿ:** ವಸ್ತ್ರಾಭರಣ, ಅತಿಥಿ– ಡಾ. ವೈಜಯಂತಿ ಮಾಲಾ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಬೆಳಗ್ಗೆ 10.30.

**ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ:** ವೀರಶೈವ– ಲಿಂಗಾಯಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಅತಿಥಿ– ಶಿವಲಿಂಗ ಸ್ವಾಮೀಜಿ, ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಎಂ.ವಿ. ವೇದಮೂರ್ತಿ, ಬಿ.ಎಸ್. ಪರಮಶಿವಯ್ಯ, ಸಿದ್ಧಗಂಗಾ ಡಾ. ಶಿವಕುಮಾರ ಸ್ವಾಮೀಜಿ ಜ್ಞಾನಪ್ರಕಾಶ ಮಂಟಪ, ಮರಿಯಪ್ಪನ ಪಾಳ್ಯ, ಜ್ಞಾನಭಾರತಿ ಬಡಾವಣೆ 2ನೇ ಹಂತ, ನಾಗರಭಾವಿ ರಸ್ತೆ, ಬೆಳಗ್ಗೆ 10.

**ಬನಶಂಕರಿ ಮಹಾತ್ಮೆ:** ಪೌರಾಣಿಕ ಯಕ್ಷೋತ್ಸವ ಮತ್ತು ಸನ್ಮಾನ ಸಮಾರಂಭ, ಅತಿಥಿ– ಸಂತೋಷ ಗುರೂಜಿ, ನೀಲಾವರ ಸಂಜೀವ ರಾವ್, ಕೆ.ಎನ್. ವಾಸುದೇವ್ ಅಡಿಗ, ಡಾ.ಎ. ನಾರಾಯಣ, ಹರಿಶ್ಚಂದ್ರ ಎನ್. ಆಚಾರ್ಯ, ಪ್ರವೀಣ್ ಕುಮಾರ್ ಶೆಟ್ಟಿ, ಸಿ.ಎ.ಪ್ರದೀಪ್ ಎಂ ಹೆಬ್ಬಾರ್, ರವೀಂದ್ರ ಕಲಾಕ್ಷೇತ್ರ, ರಾತ್ರಿ 10.

**ವಿಶ್ವೇಶ್ವರಯ್ಯ ತಾಂತ್ರಿಕ ಸಂಸ್ಥೆ:** ಕಲಾಂಜಲಿ, ಅತಿಥಿ– ಅನುರಾಧ ಶ್ರೀಧರ್, ಶ್ರೀಧರ್, ಎ.ಎಸ್. ಚಿನ್ನಸ್ವಾಮಯ್ಯ ರಾಜು, ಕೆ. ನಾರಾಯಣ ರಾಜು, ಕೃಷ್ಣದೇವರಾಯನಗರ, ಅಂತಾರಾಷ್ಟ್ರೀಯ ವಿಮಾನ ರಸ್ತೆ, ಬೆಳಗ್ಗೆ 10.

**ಕರ್ನಾಟಕ ರಾಜ್ಯ ಕೃಷಿ ಇಲಾಖೆ:** ಕೃಷಿ ವಿಚಾರಕ್ಕೆ ಸಂಬಂಧಿಸಿದ ವಿಚಾರ ಸಂಕಿರಣ, ಅತಿಥಿ– ಕೃಷಿ ಸಚಿವ ಉಮೇಶ್ ಕತ್ತಿ, ಡಾ. ಸಂದೀಪ್ ಧವೆ, ಕ್ಯಾಪಿಟಲ್ ಹೊಟೇಲ್, ರಾಜಭವನ ರಸ್ತೆ, ಬೆಳಗ್ಗೆ 9.30.

# ಅಂಗವಿಕಲರ ಪ್ರತಿಭೆ ಗುರುತಿಸಲು ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಕರೆ




**ನೆಲದ ನಕ್ಷತ್ರಗಳ ನೆಂಟು ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಪ್ರಸಾದ್, ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ ಎಚ್. ವಿಶ್ವನಾಥ್, ಲೇಖಕಿ ಡಾ. ಶುಭದಾ ಉಪಸ್ಥಿತರಿದ್ದರು.**

**ಬೆಂಗಳೂರು:** ಅಂಗವಿಕಲ ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಅವರನ್ನು ರಾಜ್ಯದ ಆಸ್ತಿಯಾಗಿಸಿಕೊಳ್ಳಬೇಕು ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಕೇಸರಿ ಕಿರಣ ಪ್ರಕಾಶನ ಹೊರತಂದ ಡಾ.ಎಚ್.ಎನ್.ಶುಭದಾ ಅವರ 'ನೆಲದ ನಕ್ಷತ್ರಗಳ ನೆಂಟು' ಎಂಬ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಎಲ್ಲ ಅವಯವ ಸರಿ ಇರುವವರ ಪರಿಪೂರ್ಣವಾಗಿರುವುದಿಲ್ಲ. ಅಂಥದ್ದರಲ್ಲಿ ವಿಕಲಚೇತನ ಮಕ್ಕಳಲ್ಲಿನ ದೋಷಗಳನ್ನು ನೋಡಿ ಅವರನ್ನು ದೂರವಿರಿಸಿದರೆ ಅದು ಮಹಾ ಅಪರಾಧ. ಅವರ ಬಗ್ಗೆ ಯಾರಿಗೂ ಯಾವ ಸಂದರ್ಭದಲ್ಲೂ ಬೇಸರ ಉಂ–ಟಾಗದಂತೆ ನೋಡಿಕೊಳ್ಳಬೇಕು. ಅಂಗವಿಕಲರಲ್ಲೂ ಪ್ರತಿಭೆ, ಕೌಶಲ್ಯಗಳಿರುತ್ತವೆ. ಅವುಗಳನ್ನು ಗುರುತಿಸಿ ತರಬೇತುಗೊಳಿಸಿ ಬೆಳೆಸಬೇಕು, ಸ್ವಾವಲಂಬಿಗಳನ್ನಾಗಿಸಬೇಕು. ಆ ಮೂಲಕ ಅವರನ್ನು ತಮ್ಮ ಆಸ್ತಿಯಾಗಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಅಂಗವಿಕಲರಿಗಾಗಿ ಸರ್ಕಾರ ₹ 40 ಕೋಟಿ ಮೀಸಲಿಟ್ಟಿದೆ. ಈ ಮೊತ್ತ ಯಾವ ರೀತಿ ಬಳಕೆಯಾಗಬೇಕು ಎಂಬ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ಆ ಮೂಲಕ ವಿಕಲಚೇತನರ ಕಲ್ಯಾಣ ಕಾರ್ಯಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಬೇಕು ಎಂದರು.

ಕೃತಿಯ ಬಗ್ಗೆ ಮಾತನಾಡಿದ ಕಾಗೇರಿ, ಲೇಖಕರು ಮಕ್ಕಳ ಜತೆಗೆ ಇಡೀ ಸಮಾ–ಜಕ್ಕೆ ಆತ್ಮವಿಶ್ವಾಸ ನೀಡಲು ಹೊರಟಿದ್ದಾರೆ. ತಮ್ಮ ಸೀಮಿತ ಚೌಕಟ್ಟು ಮೀರಿ ಸಾಮಾಜಿಕ ಜವಾಬ್ದಾರಿ ನಿರ್ವಹಿಸುವ ಕೆಲಸ ಮಾಡುತ್ತಿದ್ದಾರೆ. ಕೃತಿಯಲ್ಲಿ ಜೀವನಾನುಭವವೇ ಬರಹವಾಗಿ ಮೂಡಿಬಂದಿದೆ ಎಂದರು.

ಲೋಕಸಭಾ ಸದಸ್ಯ ಎಚ್.ವಿಶ್ವನಾಥ್ ಮಾತನಾಡಿ, ಆದಾಯವಿರದ ಕೆಲಸವನ್ನು ಯಾರೂ ಮಾಡುವುದಿಲ್ಲ ಹಾಗೂ ಮಾಡುವವರನ್ನೂ ಪ್ರೋತ್ಸಾಹಿಸುವುದಿಲ್ಲ. ಆದರೆ, ಯಾವುದೇ ಫಲಾಪೇಕ್ಷೆ ಇಲ್ಲದೆ ಸಾಮಾಜಿಕ ಜವಾಬ್ದಾರಿಯನ್ನು ಈ ಲೇಖಕರು ನಿಭಾಯಿಸುತ್ತಿದ್ದಾರೆ ಎಂದರು.

ಲೇಖಕಿ ಡಾ.ಶುಭದಾ, ಅವರ ಪತಿ ಪ್ರಸಾದ್ ಹಾಗೂ ಬಾಂಧವ್ಯ ಶಾಲೆಯ ಸಿಬ್ಬಂದಿ ಹಾಜರಿದ್ದರು.

**ಬಿಜೆಪಿಯಲ್ಲಿ ಡಾ.ವಿ.ಎಸ್.ಆಚಾರ್ಯ, ವಿಶ್ವೇಶ್ವರ ಹೆಗಡೆ ಕಾಗೇರಿಯಂತಹ ಕೆಲವೇ ಕೆಲವು ಪ್ರಾಮಾಣಿಕ ರಾಜಕಾರಣಿಗಳಿದ್ದಾರೆ. ಅಂತಹವರ ಸಂಖ್ಯೆ ಹೆಚ್ಚು ಇದ್ದಿದ್ದರೆ ಆಡಳಿತ ಪಕ್ಷದವರು ಜೈಲಿಗೆ ಹೋಗುವ ಪರಿಸ್ಥಿತಿ ಬರುತ್ತಿರಲಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಅನೇಕ ರಾಜಕಾರಣಿಗಳು ಪಕ್ಷಾತೀತವಾಗಿ ಮದುವೆ ಮನೆಗೆ ಹೋಗುವಂತೆ ಕುಟುಂಬ ಸಮೇತರಾಗಿ ಜೈಲಿಗೆ ತೆರಳಲಿದ್ದಾರೆ.**

**■ ಎಚ್.ವಿಶ್ವನಾಥ್, ಸಂಸದ**